ನನ್ನೆಲ್ಲ ಬೇರುಗಳನ್ನು ಅದರತ್ತ ಚಲಿಸುವಂತೆ ಪ್ರೇರೇಪಿಸಿದೆ. ಅವೋ, ನನ್ನ ಅರಿವಿಗೆ ಬರುವಷ್ಟು ವೇಗವಾಗಿ ಅದರೆಡೆಗೆ ಬೆಳೆಯಲಾರಂಭಿಸಿದವು, ಆಳಕ್ಕೆ ಇಳಿಯಲಾರಂಭಿಸಿದವು. ಆ ನೀರಿನ ತೇವವು ನನ್ನ ಬುಡದವರೆಗೆ ಬರದಿದ್ದರೂ, ನನ್ನ ಬೇರುಗಳು ಮಾತ್ರ ಪ್ರಾಣಿಗಳ ದೇಹದೊಳಗಿನ ನರನಾಡಿಗಳಂತೆ ಭೂಮಿಯ ಮೈಯೊಳಗೆಲ್ಲ ಹರಡಿದವು. ಅವು ನನ್ನ ನಿಯಂತ್ರಣವನ್ನೂ ಮೀರಿ ಒಂದು ಜಲಮಂಡಲವನ್ನೇ ಸೃಷ್ಟಿಸಿದ್ದು ನನ್ನ ಅರಿವಿಗೆ ಬಂತು. ನನ್ನ ಅನೇಕ ಬೇರುಗಳು ಅನೇಕ ಜಲದ ಕಣ್ಣುಗಳನ್ನು ಭೇದಿಸಿ, ಜೀವರಸವನ್ನು ನನ್ನ ಮೈಗೆ ಉಣಬಡಿಸಲಾರಂಭಿಸಿದವು. ನನ್ನ ರೆಂಬೆಕೊಂಬೆಗಳು ಬೇರಿನ ಆಳಕ್ಕೆ ಅಗಲಕ್ಕೆ ಅನುಗುಣವಾಗಿ ಹರಡಲಾರಂಭಿಸಿದವು. ಕ್ರಮೇಣ ನನ್ನ ಬಿರುಸಾದ ಬೇರುಗಳು ನದಿಯ ಪಾತ್ರಕ್ಕೂ ಲಗ್ಗೆ ಹಾಕಿದವು. ಬರಲಿರುವ ಬಿರುಬೇಸಿಗೆಗೆ ಇನ್ನು ನಾನು ಅಂಜಬೇಕಿರಲಿಲ್ಲ. ಅಲ್ಲಿಂದ ನೀರನ್ನು ನಿರಂತರವಾಗಿ ಮೇಲೆತ್ತುವ ಯಂತ್ರದಂತೆ ಜೀವಜಲವನ್ನು ಸರಬರಾಜು ಮಾಡಲಾರಂಭಿಸಿದವು. ನನ್ನ ಬೇರುಗಳನ್ನು, ಇದ್ಯಾವುದೋ ಪರ್ಯಾಯ ತಮ್ಮ ಘಾಸಲೆಯೊಳಗೆ ಬಂದಿತಲ್ಲ ಎಂದು ಬೆದರಿದ ಮೀನುಗಳು ಪರೀಕ್ಷಿಸುವ ಉಮೇದಿನಲ್ಲಿ ಕಚ್ಚಿಕಚ್ಚಿ ಕಚಗುಳಿ ಇಡಲಾರಂಭಿಸಿದವು. ನೀರುಹಾವುಗಳು ತಮ್ಮ ದೇಹವನ್ನು ತಂದು ನನ್ನ ಬೇರಿಗೆ ಸುತ್ತುಹಾಕಿಕೊಂಡು, ಕೊಚ್ಚಿ ಹೊಯ್ಯುವ ನೀರ ಪ್ರವಾಹದಿಂದ, ಇಲ್ಲವೇ ತಮ್ಮ ವೈರಿಗಳಿಂದ ರಕ್ಷಿಸಿಕೊಳ್ಳಲಾರಂಭಿಸಿದವು.

ಬೇಸಿಗೆಯಲ್ಲಿ ಈ ನದಿಯೆಂಬ ರಂಭೆಯ ಪಾಡು ಇದಾದರೆ, ಮಳೆಗಾಲದಲ್ಲಿ ನೋಡಬೇಕು: ಯಾವುದೋ ಛಲದ ಗುಣ ಐಕ್ಯವಾಗಿರುವಂತೆ, ದೇವಿಯನ್ನೇ ಆವಾಹಿಸಿಕೊಂಡವಳಂತೆ, ಒಮ್ಮೆ ಮುಂದೆ ಹರಿದರೆ ಹಿಂದಿರುಗಿ ನೋಡುವ ಮಾತೇ ಇಲ್ಲ ಎನ್ನುವಂತೆ ಹಾರುತ್ತಾ, ನೆಗೆಯುತ್ತಾ, ಉರುಳುರುಳುತ್ತಾ, ಮುನ್ನುಗ್ಗುತ್ತಾ, ಕೊಬ್ಬಿದ ರಣಚಂಡಿಯಂತೆ ಬುಸುಗುಡುತ್ತಾ ಈಗಿಂದೀಗಲೇ ಸಮುದ್ರರಾಜನಲ್ಲಿ ಐಕ್ಯವಾಗಿ ಮಿಲನ ಸುಖವನ್ನು ಹೊಂದಿಬಿಡಬೇಕು ಎಂಬಂತೆ ರಭಸದಿಂದ ಮುನ್ನುಗ್ಗುತ್ತಿದ್ದಳು.

ಸುತ್ತಮುತ್ತ ಎಂಥ ಕಾಡು ಆವರಿಸಿತ್ತೆಂದರೆ ಅವಳ ಇರುವೇ ತಿಳಿಯುತ್ತಿರಲಿಲ್ಲ. ನನ್ನಂಥ ನೂರಾರು ಮರಗಳು ಆಕೆಯ ಅರ್ಧನೀರನ್ನು ಹರಿಯುವ ಮೊದಲೇ ಹೀರಿಕೊಂಡುಬಿಡುತ್ತಿದ್ದವೇನೋ. ಹೀಗೆ ಬೆಳೆದ ಮರಗಳಿಂದಾವೃತವಾದ ಪಶ್ಚಿಮಘಟ್ಟಗಳ ಸಾಲುಸಾಲು ಬೆಟ್ಟಗಳು, ಪದರದ ಹಿಂದೆ ಪದರದಂತೆ, ಹಸಿರಿನಿಂದ ದಟ್ಟ ಹಸಿರಿಗೆ, ದಟ್ಟ ಹಸಿರಿನಿಂದ ದಟ್ಟ ನೀಲಿಗೆ, ದಟ್ಟ ನೀಲಿಯಿಂದ ತಿಳಿನೀಲಿಗೆ, ತಿಳಿ ನೀಲಿಯಿಂದ ಅತಿ ತಿಳಿನೀಲಿಗೆ ಬದಲಾಗುತ್ತ ನೀಲಾಕಾಶದ ಜೊತೆ ಸೇರಿ ಕ್ಷಿತಿಜವೇ ಕಾಣದಂತಾಗಿತ್ತು. ಅದಕ್ಕೆ ಇಂಬು ನೀಡುವಂತೆ ತುಂಬಿದ ಬಸುರಿಯಂತೆ ಸಾಗುವ ಕಂದು ಮೋಡಗಳು ಅಲ್ಲಲ್ಲಿ ನಿಂತು ತುಳುಕಿ ತುಳುಕಿ ಸ್ವಲ್ಪ ಸ್ವಲ್ಪ ಮಳೆನೀರು ಚೆಲ್ಲಿ ಹಗುರಾಗಿ ಮುಂದೆ ಹೋಗುತ್ತಿದ್ದವು. ಅವುಗಳ ಸುತ್ತ ಲಾಸ್ಯವಾಡುತ್ತಿದ್ದ ಹತ್ತಿಯು ಹಿಂಜಿದಂಥ ತಿಳಿನೀಲಿ ಮೋಡಗಳು ಮಕ್ಕಳಂತೆ ಅತ್ತಿಂದಿತ್ತ ಇತ್ತಿಂದತ್ತ ಆಕಾಶದಂಗಳದಲ್ಲಿ ತೇಲಾಡಿ ತೇಲಾಡಿ ಜೂಟಾಟ ಆಡುತ್ತಿದ್ದವು.

ಕೆಳಗೆ ನಿಂತು ಆ ಮೋಡಗಳನ್ನು ತಮ್ಮತ್ತ ಕೈಮಾಡಿ ಕರೆಯುವಂತೆ ಗಾಳಿಗೆ ತೂಗಾಡುತ್ತಿದ್ದ ಶ್ರೀಗಂಧ, ಬೀಟೆ, ತೇಗ, ಅಳಲೆ, ಆಲ, ಅಗಸೆ, ಅಶೋಕ, ತಾಳೆ, ಕಂಚವಾಳ, ಜಂಬೆ, ಜಾಲಿ, ಬೇವು, ಮುತ್ತುಗ, ಬೂರುಗ, ಹಲಸು, ಹಿಪ್ಪೆ, ಹೊಂಗೆ, ಸಂಪಿಗೆ, ಸುರಗಿ, ಸುರಹೊನ್ನೆ, ಬೇವು, ಮಾವು, ಹುಣಸೆ, ಹೊನ್ನೆ, ಮತ್ತಿ, ನಂದಿ, ತಡಸ, ದೇವದಾರು, ನೇರಳೆ, ದಿಂಡಿಗ, ಶಿವನಿ ಮುಂತಾದ ಸಾವಿರಾರು ಜಾತಿಯ ಮರಗಳು ಈ ಕಾಡಿನಲ್ಲಿ ತಮ್ಮನ್ನು ಮೀರಿಸುವ ಮತ್ತೊಂದು ಮರವಿಲ್ಲ ಎಂಬಂಥ ಕೊಬ್ಬಿನಿಂದ ಬೀಗಿ ಬೀಗಿ ಬೀಳುತ್ತಿದ್ದವು. ಒಂದನ್ನೊಂದು ಮೀರಿಸುವ ರೀತಿ ಪೈಪೋಟಿಯ ಮೇಲೆ ಆಳಕ್ಕೆ, ಅಗಲಕ್ಕೆ, ಎತ್ತರಕ್ಕೆ ಮುನ್ನುಗ್ಗುತ್ತಿದ್ದವು. ಅವುಗಳ ಅಡಿಯಲ್ಲಿ ಜೀವ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದ ಗಿಡ, ಗಂಟಿ, ನಾರು, ಬೇರುಗಳು ಪತರಗುಟ್ಟುತ್ತಿದ್ದವು. ಬೇಸಿಗೆಯಲ್ಲಂತೂ ಅವುಗಳು ತಮ್ಮನ್ನು ಇರಲಿ, ತಮ್ಮ ಸಂತಾನವಾದ ಬೀಜಗಳನ್ನು ಉಳಿಸಿಕೊಳ್ಳುವುದೂ ಕಷ್ಟವಾಗುತ್ತಿತ್ತು. ಬಿದಿರು ಬೊಂಬುಗಳು ಪರಸ್ಪರ ತಿಕ್ಕಾಡೀ ತಿಕ್ಕಾಡಿ, ಆ ಘರ್ಷಣೆಯ ಬಿಸಿಗೇ ಬಿಸಿಲು ತಾಗಿ ಹೊಗೆಯಾಡಿ ಆ ಹೊಗೆಗೆ ಗಾಳಿ ಬೀಸಿ ಝಳವಾಗಿ ಆ ಝಳ ಕಾಡ್ಗಿಚ್ಚಿನ ಕಿಡಿಯಾಗಿ, ಒಣಗಿ ನರಚಲಾಗಿದ್ದ ಎಲೆಬಳ್ಳಿಗಳಿಗೆ ತಾಗಿ ಇಡೀ ಕಾಡಿಗೆ ಕಾಡೇ ವಾರಗಟ್ಟಲೇ ಉರಿದು ಭಸ್ಮವಾಗಿ ಬಿಡುತ್ತಿತ್ತು. ದೂರದ ಬೆಟ್ಟದ ಮೇಲೆ ಸಾಲುದೀಪ ಹಚ್ಚಿದಂತೆ ಭಾಸವಾಗುತ್ತಿದ್ದ ಆ ಮಿಂಚಿನ ಬಳ್ಳಿಯ ಜ್ವಾಲೆ ಒಮ್ಮೆಗೇ ನನ್ನೆಡೆಗೂ ಬಂದು ನನ್ನ ಮೈಕೈಯ್ಯನ್ನೆಲ್ಲ ಸುಟ್ಟು ಭಸ್ಮ ಮಾಡಿಬಿಟ್ಟೀತೆಂಬ ಯೋಚನೆಯೇ ಆಗ ನನಗಿರಲಿಲ್ಲ.

ಅದೊಂದು ಬೇಸಿಗೆ. ಭೂಮಿ ಸೂರ್ಯನಿಗೆ ಹತ್ತಿರವಾಗಿಬಿಟ್ಟಿತೇನೋ ಎಂಬಂತೆ ಝಳ ಎನ್ನುವುದು ನನ್ನ ಸುಳಿಗಳನ್ನೆಲ್ಲ ಸುಟ್ಟು ಹಾಕಿಬಿಡುವಂತೆ ಸುಳಿದಾಡುತ್ತಿತ್ತು. ಬಯಲಲ್ಲೆಲ್ಲ ಬಿಸಿ ಗಾಳಿಯ ಅಲೆಗಳು ಕಾಣುತ್ತಿದ್ದವು. ಆಗ ತಾನೇ ಮೂಡಿದ್ದ ನನ್ನ ಚಿಗುರೆಲೆಗಳು ಅದರ ರಭಸಕ್ಕೆ ಬಾಡಿ ಬತ್ತಿ ಬೆಂಡಾಗಿ ಮುರುಟಲಾರಂಭಿಸಿದ್ದವು. ಹಳದಿ ಹತ್ತಿದ್ದ ಹಣ್ಣೆಲೆಗಳು ಉದುರಿ ಅದರ ಜಾಗದಲ್ಲಿ ಕಂದು–ಕೆಂಬಣ್ಣ ಮಿಶ್ರಿತ ಚಿಗುರುಗಳು ಮೂಡುತ್ತಿದ್ದವು. ಇನ್ನೇನು ಇನ್ನೊಂದು ವಾರದೊಳಗೆ ಎಲ್ಲವೂ ಹಸಿರು ಬಣ್ಣಕ್ಕೆ ತಿರುಗಲಿದ್ದವು. ಅಷ್ಟರಲ್ಲಿ ಅದೆಲ್ಲಿತ್ತೋ ಬಂತು ನೋಡಿ, ಆ ದರಿದ್ರ ಬೆಂಕಿ!

ಅದುವರೆಗೆ ನನಗೆ ಅದರ ಅಪಾಯದ ಅರಿವೇ ಇರಲಿಲ್ಲ. ಬಹುಶಃ ನಾನಾಗ ಹದಿನೈದಿಪ್ಪತ್ತರ ವಯೋಮಾನದವನಿರಬೇಕು. ನಯವಾದ ತೊಗಟೆ, ಹೊಸದಾಗಿ ನದಿ ನೀರಿಗೆ ಬಾಯಿಟ್ಟಿದ್ದರಿಂದ ಸಿಗುತ್ತಿದ್ದ ಸಮೃದ್ಧ ಸಿಹಿನೀರಿನಿಂದ ಮೈಮನಗಳಲ್ಲೆಲ್ಲ, ರೆಂಬೆ ಕೊಂಬೆಗಳಲ್ಲೆಲ್ಲ ಜೀವಜಲ ಹರಿಸುತ್ತ ಸುಖವಾಗಿದ್ದೆ. ಅಕ್ಕಪಕ್ಕದ ಪೊದೆ ಮೆದೆಗಳನ್ನೆಲ್ಲ ಮೀರಿ ಎತ್ತರೆತ್ತರಕ್ಕೆ ಧಾವಿಸುತ್ತಿದ್ದೆ. ಅಲ್ಲೆಲ್ಲ ಸುತ್ತಮುತ್ತ ಇಣುಕಿ ನೋಡಿದರೂ ನನ್ನ ಜಾತಿಯ ಒಂದು ಮರವೂ ಕಾಣುತ್ತಲೇ ಇರಲಿಲ್ಲ. ಬಹುಶಃ ಹತ್ತಿರದಲ್ಲೆಲ್ಲೂ ಇರಲಿಲ್ಲವೇನೋ! ಹಾಗಾದರೆ ನಾನಾದರೂ ಇಲ್ಲಿ ಹೇಗೆ ಬಂದು ಹುಟ್ಟಿದೆ ಎಂಬುದೇ ಒಂದು ಯಕ್ಷಪ್ರಶ್ನೆಯಾಗಿತ್ತು.

ಆ ಬಿದಿರು ಬೊಂಬುಗಳಿಗೆ ಅರವತ್ತು ವರ್ಷದ ಪೂರ್ಣ ಜೀವಿತಾವಧಿಯಲ್ಲಿ ಪರಸ್ಪರ ತಿಕ್ಕಾಡಿ ತಿಕ್ಕಾಡಿ ಬೆಳೆದಿದ್ದರೂ ತಮ್ಮ ದೇಹದ ಕಾವನ್ನು ಆರಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಬಿದಿರಕ್ಕಿ ಮೂಡಿ ಉದುರಿ ಒಣಗಿ ಸತ್ತಿದ್ದರೂ ಅವುಗಳ ಮೈ ಕಾವು ಇನ್ನೆಷ್ಟಿರಬೇಡ. ಒಣಗಿ ಬಿದ್ದಿದ್ದ ಒಣ ಎಲೆಗಳಿಗೆಲ್ಲ ಘರ್ಷಣೆಯಿಂದ ಉಂಟಾದ ಶಾಖವನ್ನು ತಗುಲಿಸಿ, ಬೆಂಕಿ ಹಚ್ಚಿ ತಮ್ಮ ಅಂತಿಮ ಸಂಸ್ಕಾರವನ್ನು ತಾವೇ ಮಾಡಿಕೊಂಡಿದ್ದವು. ಮಾತ್ರವಲ್ಲ, ಅದನ್ನು ಕಾಡ್ಗಿಚ್ಚಾಗಿ ಪರಿವರ್ತಿಸಿ ತಮ್ಮನ್ನು ಇಷ್ಟು ವರ್ಷ ಬಾಳಿ ಬದುಕಲು ಅವಕಾಶ ನೀಡಿದ್ದ ಸಮೃದ್ಧ ಜೊಂಪೆಜೊಂಪೆ ಕಾಡಿನ ಮರಗಳನ್ನೆಲ್ಲ ಆಹುತಿ ತೆಗೆದುಕೊಳ್ಳಲು ಮನಸ್ಸಾದರೂ ಹೇಗೆ ಬಂತೋ? ಬೇಸಿಗೆಯ ಬಿಸಿಲಿಗೆ ಒಣಗಿದ್ದ ಹುಲ್ಲಿಗೆ, ಸಣ್ಣಪುಟ್ಟ ಗಿಡಗಂಟೆಗಳಿಗೆ, ಲಂಟಾನದ ಪೊದೆಗಳಿಗೆಲ್ಲ ತನ್ನ ಜ್ವಾಲೆಗಳನ್ನು ತಗುಲಿಸುತ್ತ ತಗುಲಿಸುತ್ತ ಲಟಲಟನೆಂದು ಉರಿದುರಿದು ಬೂದಿಮಾಡಿ ಬಿಸಾಕುತ್ತಿರುವಾಗ, ಬೀಸಿದ ಬಿರುಗಾಳಿಯಿಂದಾಗಿ ತನ್ನ ವ್ಯಾಪ್ತಿ ಪರಿಧಿಗಳನ್ನು ವಿಸ್ತರಿಸಿಕೊಳ್ಳುತ್ತ ಒಂದು ಕಡೆಯಿಂದ ಎಲ್ಲವನ್ನು ಬಾಚಿ ಬಾಚಿಕೊಂಡು ಆಹುತಿ ಪಡೆಯುತ್ತಾ ಮುನ್ನುಗ್ಗುತ್ತಿತ್ತು. ವಸಂತಕಾಲಕ್ಕೆ ಕಾಡ ತುಂಬ ಉದುರುದುರಿ ಬಿದ್ದಿದ್ದ ಗಿಡಮರದೆಲೆಗಳೆಲ್ಲ, ಮಣ್ಣಲ್ಲಿ ಮಣ್ಣಾಗಿ ಬೆರೆತು ಗೊಬ್ಬರವಾಗಿ ಬೇರುಗಳಿಗೆ ಸೇರಿ ರಸವಾಗಿ ನಮ್ಮ ಮೈಗೇರುವ ಮೊದಲೇ ಬೆಂಕಿ ಜೊತೆ ಸೇರಿ ತರಗೆಲೆಗಳಂತೆ ಪಟಪಟನೆ ಸಿಡಿಯುತ್ತ ಪುಡಿಪುಡಿಯಾಗಿ ಬೂದಿಯಾಗಿ ಹೋಯಿತು. ಅಲ್ಲಿಂದ ಆರಂಭವಾದ ಆ ಜ್ವಾಲೆಯ ಪ್ರಖರತೆ ಎಷ್ಟಿತ್ತೆಂದರೆ ಸಣ್ಣಪುಟ್ಟ ಹಸಿಹಸಿ ಗಿಡಗಳೆಲ್ಲ ಸುಳಿಯವರೆಗೂ ಸುರುಳಿ ಸುತ್ತಿಸುತ್ತಿ ಭಸ್ಮವಾದರೆ ಒಣಗಿದ ಮರದ ಕಾಂಡದೊಳಗೆ ಕೆಂಡವಾಗಿ ಸೇರಿಕೊಂಡು ವಾರಗಟ್ಟಲೇ ಉರಿಯುತ್ತಲೇ ಇದ್ದವು.

ಕೆಲವು ಮರಗಳ ಬುಡಗಳಂತೂ ಕರಗಿ ಬೂದಿಗುಡ್ಡದಂತೆ ಮರದ ಆಕಾರದಲ್ಲೇ ನಿಂತುಬಿಟ್ಟಿತ್ತು. ಕ್ರಮೇಣ ಅದು ಗಾಳಿಗೆ ಕುಸಿಕುಸಿದು ಬಿದ್ದುಹೋಯಿತು. ನಿರಂತರವಾಗಿ ಬೀಸುತ್ತಿದ್ದ ಗಾಳಿಯು ಆ ಬೆಂಕಿಯ ಬಳ್ಳಿಯನ್ನು ಹಗ್ಗದಂತೆ ಮೈಲಿಗಟ್ಟಲೇ ಸರಿಗಟ್ಟಿಕೊಂಡು ಸುಡುತ್ತ, ಪ್ರಾಣಿ ಪಕ್ಷಿ ಕ್ರಿಮಿ ಕೀಟಾದಿಗಳನ್ನೆಲ್ಲ ಬಿಡದೇ ಖಾಂಡವವನಕ್ಕೆ ಅರ್ಜುನ ಹಚ್ಚಿದ ಬೆಂಕಿಯಂತೆ ಆಕ್ರಮಿಸುತ್ತಿತ್ತು. ಕಾಡುಪ್ರಾಣಿಗಳು ಅದರ ವಿರುದ್ಧ ದಿಕ್ಕಿಗೆ ಚಲಿಸುತ್ತ ಕೆಲವು ಕಡೆ ಬೆಂಕಿಯುಂಡೆಗಳನ್ನು ಹಾರುತ್ತ ತಪ್ಪಿಸಿಕೊಂಡುಬಿಟ್ಟವು. ಪಕ್ಷಿಗಳೇನೋ